# ‘ಶಕ್ತಿಸಮುದ್ರಸಮುತ್ಥ ತರಂಗಂ’

ಮಾತಾ ತ್ಯಾಗಮಯೀ


ಶ್ರೀರಾಮಕೃಷ್ಣರ ಅಭೂತಪೂರ್ವ ಜೀವನವನ್ನು ಕುರಿತು ಆಲೋಚಿಸಿದಷ್ಟೂ ಅವರ ವ್ಯಕ್ತಿತ್ವದ ಆಳ, ಅಗಲಗಳು ಇನ್ನಷ್ಟು ಅಗೋಚರವಾಗುತ್ತ ಹೋಗುತ್ತವೆ. ಆಧುನಿಕ ಜಗತ್ತಿಗೆ ಆಧ್ಯಾತ್ಮಿಕ ಆದರ್ಶವನ್ನು ನೀಡಿರುವ ಈ ಅವತಾರವರಿಷ್ಠರ ಮಹತ್ವವನ್ನು ಕುರಿತು ವಿವೇಚಿಸಿರುವ ಲೇಖಕಿ, ಚಳ್ಳಕೆರೆ ಶ್ರೀ ಶಾರದಾಶ್ರಮದ ಮುಖ್ಯಸ್ಥರು. ಉತ್ತಮ ಬರಹಗಾರರೂ, ಅನುವಾದಕರೂ, ವಾಗ್ಮಿಯೂ ಆಗಿರುವ ಅವರು ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಪರಬ್ರಹ್ಮ ಸಮುದ್ರದಲ್ಲಿ ಮೇಲೆದ್ದ ಶಕ್ತಿಯ ಮಹಾನ್ ತರಂಗ ಅವತಾರ ಶ್ರೀರಾಮಕೃಷ್ಣರು. ನಾವು ನೀವು ಬರಿಯ ಬುದ್ಬುದಗಳು. ಬುದ್ಬುದಗಳಾದ ನಮಗೆ ತರಂಗವನ್ನೇ ಅರ್ಥ ಮಾಡಿಕೊಳ್ಳುವುದು ಅತ್ಯಂತ ಕಠಿಣವಿದೆ. ಇನ್ನು ಪರಬ್ರಹ್ಮ ಸಮುದ್ರ ನಮ್ಮ ಮನೋಬುದ್ಧಿಗಳ ಅಂಕೆಗೆ ಮೀರಿದ್ದು. ಇರುವೆಯೊಂದು ಕಣಮಾತ್ರ ಸಕ್ಕರೆಯ ಸೇವನೆಯಿಂದ ತೃಪ್ತವಾಗುತ್ತದೆ. ಸಕ್ಕರೆ ಬೆಟ್ಟ ಎಂದೂ ಅದರ ವ್ಯಾಪ್ತಿಗೆ ಎಟುಕುವಂಥದ್ದಲ್ಲ. ಹಾಗೆ ಬುದ್ಬುದಗಳಾದ ನಮಗೆ ತರಂಗವೇ ಸಮುದ್ರದಷ್ಟಾಯಿತು. ನಾವು ತರಂಗವನ್ನು–ಅವತಾರವನ್ನು–ಅದೂ ಅವನ ಕೃಪೆಯಿಂದ ತಿಳಿದುಕೊಂಡರೆ ಬೇಕುಬೇಕಾದಷ್ಟಾಯಿತು. ಪರಬ್ರಹ್ಮ ಮನುಷ್ಯಮಾತ್ರನಿಗೆ ಎಟುಕಲಾರದು. ಇದಕ್ಕೆ ಶ್ರೀರಾಮಕೃಷ್ಣರು ಎರಡು ಉದಾಹರಣೆಗಳನ್ನು ನೀಡುತ್ತಾರೆ.

೧) ‘‘ಆ ಅನಂತ ಸಚ್ಚಿದಾನಂದ ಸಾಗರವನ್ನು ನಾರದ ದೂರದಿಂದಲೇ ನೋಡಿ ಹಿಂದಿರುಗಿದ. ನಿತ್ಯಶುದ್ಧನಾದ ಶುಕದೇವ ಅದನ್ನು ಸುಮ್ಮನೆ ಮೂರು ಸಲ ಮುಟ್ಟಿದ. ಸಾಕ್ಷಾತ್ ಮಹಾದೇವ ಶಿವನೂ ಸಾಗರದಿಂದ ಮೂರು ಬೊಗಸೆ ನೀರು ಕುಡಿಯುವಷ್ಟರಲ್ಲೆ ಆನಂದಪ್ರಮತ್ತತೆಯಿಂದ ಪ್ರಜ್ಞಾಶೂನ್ಯನಾಗಿ ಬಿದ್ದುಬಿಟ್ಟಿದ್ದಾನೆ.’’ [೧]

೨) ಪರಬ್ರಹ್ಮ ನೇರಳೆ ಹಣ್ಣಿನ ವೃಕ್ಷವಿದ್ದ ಹಾಗೆ. ಅದರಲ್ಲಿ ರಾಶಿ ರಾಶಿ ನೇರಳೆ ಹಣ್ಣಿನ ಗೊಂಚಲುಗಳಿವೆ. ಅವು ನೇರಳೆ ಹಣ್ಣಿನ ಗೊಂಚಲುಗಳಲ್ಲ. ಒಂದೊಂದು ಗೊಂಚಲೂ ಕೃಷ್ಣರ ಗೊಂಚಲುಗಳು. ನಮಗೆ ಅವತಾರ ತತ್ತ್ವವೊಂದನ್ನೇ, ಒಬ್ಬ ಕೃಷ್ಣನನ್ನೇ ತತ್ತ್ವತಃ ಅರ್ಥಮಾಡಿಕೊಳ್ಳಲು ಬರದು. ಇನ್ನು ಗೊಂಚಲು ಕೃಷ್ಣರನ್ನು! ಇನ್ನು ಅಂತಹ ಅಸಂಖ್ಯ ಗೊಂಚಲುಗಳಿಂದ ತುಂಬಿದ ನೇರಳೆ ವೃಕ್ಷವನ್ನು ಎಂದರೆ ಪರಬ್ರಹ್ಮ ವಸ್ತುವನ್ನು!

ಆದ್ದರಿಂದ ನಮ್ಮ ಪಾಲಿಗೆ ಅವತಾರನೇ ಪರಬ್ರಹ್ಮ, ಪೂರ್ಣಬ್ರಹ್ಮ ಪರಮೇಶ್ವರ ಪುರುಷೋತ್ತಮ! ಮನುಷ್ಯರಾಗಿ ನಾವು ಮನುಷ್ಯರೂಪದಲ್ಲಿ ಮಾತ್ರ ದೇವನನ್ನು ಅರ್ಥಮಾಡಿಕೊಳ್ಳಬಲ್ಲೆವು!



ಸ್ವಾಮಿ ವಿವೇಕಾನಂದರು ಅರ್ಥಮಾಡಿಕೊಂಡಂತೆ, ನಾವು ಶ್ರೀರಾಮಕೃಷ್ಣಾವತಾರವನ್ನು ಅರ್ಥಮಾಡಿಕೊಳ್ಳುವ ಮಾತಂತಿರಲಿ, ಕಲ್ಪಿಸಿಕೊಳ್ಳಲೂ ಆರೆವು. ಸ್ವಾಮೀಜಿಯವರ ಆ ಗಂಭೀರ ಮಾತುಗಳನ್ನು ನಾವು ಕೇವಲ ಮನನ ಮಾಡಲೆತ್ನಿಸಬೇಕು. ಅವರು ಶ್ರೀರಾಮಕೃಷ್ಣಾವತಾರವನ್ನು ಕುರಿತಂತೆ ಏನೆನ್ನುತ್ತಾರೆ?

‘‘ಈ ಅಸೀಮ ಅನಂತಭಾವವು ಸನಾತನ ಶಾಸ್ತ್ರ ಮತ್ತು ಧರ್ಮಗಳಲ್ಲಿ ನಿಹಿತವಾಗಿದ್ದರೂ, ಕೆಲವು ಕಾಲ ಮಾತ್ರ ಪ್ರಚ್ಛನ್ನವಾಗಿದ್ದ ಈ ಅನಂತಭಾವವು ಈ ಯುಗಾವತಾರನಿಂದ ಪುನರಾವಿಷ್ಕೃತವಾಗಿ ಪಾಂಚಜನ್ಯ ಸದೃಶ್ಯವಾದ ಉಚ್ಚ ನಿನಾದದಿಂದ ಮಾನವ ಸಮಾಜದಲ್ಲಿ ಘೋಷಿತವಾಗುವುದು.’’

‘‘ಈ ನವಯುಗ ಪ್ರವರ್ತಕನಾದ ಭಗವಾನ್ ಶ್ರೀರಾಮಕೃಷ್ಣನು ಹಿಂದೆ ಅವತರಿಸಿದ ಯುಗಧರ್ಮ ಪ್ರವರ್ತಕ ಸಮೂಹದ ಪುನಸ್ಸಂಸ್ಕೃತ ಮಹಾಪ್ರಕಾಶವಾಗಿರುತ್ತಾನೆ.’’

---

೧ ‘ಯುಗಾವತಾರ ಶ್ರೀರಾಮಕೃಷ್ಣ’, ಭಾಗ ೨, ಪು. ೨೭೩

''ಯಾವ ಶಕ್ತಿಯ ಉನ್ಮೇಷಮಾತ್ರದಿಂದಲೇ ದಿಗ್ದಿಗಂತವ್ಯಾಪಿಯಾದ ಪ್ರತಿಧ್ವನಿಯಿಂದ ಜಗತ್ತು ಜಾಗೃತವಾಗುತ್ತಿರುವುದೋ ಈ ಶಕ್ತಿಯ ಪೂರ್ಣತ್ವವನ್ನು ಭಾವಿಸು, ಅನುಭವಿಸು.'' [೨]

''ನನ್ನ ಅಂತಿಮ ಮಹಾನಿರ್ಣಯವೇನೆಂದರೆ ಶ್ರೀರಾಮಕೃಷ್ಣರಿಗೆ ಯಾರೂ ಸರಿಸಾಟಿಯಿಲ್ಲ. ಶ್ರೀರಾಮಕೃಷ್ಣರಂತಹ ಅಭೂತ ಪೂರ್ವ ಪರಿಪೂರ್ಣತೆ ಈ ಜಗತ್ತಿನಲ್ಲೆಲ್ಲೂ ಇಲ್ಲ. ಸಕಲರನ್ನೂ ತಮ್ಮೆಡೆಗೆ ಸೆಳೆಯುವ ಅವರ ಅದ್ಭುತ ಅಹೈತುಕ ಕರುಣೆ, ಬದ್ಧಮಾನವನ ಮೇಲೆ ಅವರಿಗಿರುವ ತೀವ್ರ ಅನುಕಂಪೆ–ಇವನ್ನು ಇನ್ನೆಲ್ಲಿ ಕಾಣಲು ಸಾಧ್ಯ? ಅವರು ತಾವೇ ಹೇಳುತ್ತಿದ್ದಂತೆ ಅವತಾರವೇ ಆಗಿರಬೇಕು.'' [೩]

''ಅನಂತ ಬಗೆಯಲ್ಲಿ ಅಭಿವ್ಯಕ್ತಗೊಳ್ಳುವ ಸಾಧ್ಯತೆಗಳನ್ನೊಳಗೊಂಡ ಅನಂತ ಆಧ್ಯಾತ್ಮಿಕ ಭಾವನೆಗಳ ಮೂರ್ತರೂಪ ಅವರು. ಬ್ರಹ್ಮಜ್ಞಾನಕ್ಕೂ ಒಂದು ಮಿತಿಯನ್ನು ಕಲ್ಪಿಸಬಹುದೇನೋ, ಆದರೆ ನಮ್ಮ ಗುರುವಿನ ಮನಸ್ಸಿನ ಆಳಗಲಗಳಿಗೆ ಅಲ್ಲ'' [೪]

ಸ್ವಾಮಿ ಪ್ರೇಮೇಶಾನಂದರು ಶ್ರೀರಾಮಕೃಷ್ಣಾವತಾರವನ್ನು ವರ್ಣಿಸಿದ ಬಗೆ ಅತ್ಯಂತ ಹೃದಯಸ್ಪರ್ಶಿಯಾಗಿದೆ :

**ಅರೂಪ ಸಾಯರೇ ಲೀಲಾಲಹರೀ**
**ಉಠಿಲೊ ಮೃದುಲ ಕರುಣಾಬಾಯ್**
**ಆದಿ ಅಂತ ಹೀನ ಅಖಂಡೇ ವಿಲೀನ್**
**ಮಾಯಾಯ್ ಧರಿಲೇ ಮಾನವ ಕಾಯ್ ॥**

'ರೂಪವಿಲ್ಲದ ಬ್ರಹ್ಮಸಾಗರದಲ್ಲಿ ಮೃದು ಮೃದುವಾದ ಅನುಕಂಪೆಯೆಂಬ ಗಾಳಿ ಬೀಸಲು, ಲೀಲೆಯೆಂಬ ಅಲೆಗಳು ಎದ್ದವು. ಆದಿ ಅಂತ್ಯವಿಹೀನವಾದ, ಸದಾ ಅಖಂಡದಲ್ಲಿ ವಿಲೀನವಾಗಿರುವ ಪರಬ್ರಹ್ಮನು ಮಾಯೆಯ ಮುಸುಕಿನಿಂದ ಮಾನವ ಶರೀರವನ್ನು ಧರಿಸಿದನು.' ಏನದ್ಭುತ ಚಿತ್ರಣ! ಅವನು ಸ್ವ–ಇಚ್ಛೆಯಿಂದ ಮಾಯೆಯ ಮುಸುಕನ್ನು ಧರಿಸಿ ಬರುತ್ತಾನೆ. ಆ ಮುಸುಕನ್ನು ಅವನು ಯಾವಾಗ ಬೇಕಾದರೂ ಕಳಚಿ ಹಾಕಬಲ್ಲ. ನಾವು ಮಾಯೆಗೆ ವಶರಾಗಿ ಜನ್ಮ ತಾಳುತ್ತೇವೆ. ನಮ್ಮ ಮಾಯೆಯ ಆವರಣ ಅತ್ಯಂತ ಬಲಿಷ್ಠವಾಗಿದ್ದು ಕಠೋರ ಸಾಧನೆಯಿಲ್ಲದೆ ಹರಿಯಲಾರದು.

ಪರಬ್ರಹ್ಮ ಯಾವಾಗ ಅವತರಿಸುತ್ತಾನೆಂಬುದನ್ನು ಅವತಾರಪುರುಷನೇ ಗೀತೆಯಲ್ಲಿ ಅರುಹಿದ್ದಾನೆ : *(ಗೀತೆ, ೪. ೭ – ೮.)*

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ಥಾನಮಧರ್ಮಸ್ಯ ತದಾಽಽತ್ಮಾನಂ ಸೃಜಾಮ್ಯಹಮ್ ॥**
**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ**
**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥**

'ಧರ್ಮದಲ್ಲಿ ಗ್ಲಾನಿ ಉಂಟಾಗಿ, ಅಧರ್ಮವು ಮೇಲಕ್ಕೆ ಬಂದಾಗ, ಸಾಧುಗಳನ್ನು ರಕ್ಷಿಸಲು, ದುಷ್ಟರನ್ನು ನಾಶಮಾಡಲು ಮತ್ತು ಧರ್ಮಸಂಸ್ಥಾಪನೆ ಮಾಡಲು ನಾನು ಯುಗಯುಗಗಳಲ್ಲೂ ಅವತರಿಸಿ ಬರುತ್ತೇನೆ.'

ಅವನು ಶಿವ, ನಾವು ಜೀವ. ಅವನದು ಅನಂತಪ್ರಜ್ಞೆ, ನಮ್ಮದು ಅಲ್ಪಪ್ರಜ್ಞೆ. ಅವನು ಸಾಂತಜೀವನಿಗೂ ಅನಂತ ಪರ ಬ್ರಹ್ಮನಿಗೂ ನಡುವಿನ ಕೊಂಡಿ. ಅವತಾರಪುರುಷ ಏಕೆ ಬರುತ್ತಾನೆ?

೧) ಅವತಾರಪುರುಷನು ನಮ್ಮ–ನಿಮ್ಮಿಂದ ಸಾಧಿಸಲಾಗದುದನ್ನು ಮಾಡಿ ತೋರಿಸುತ್ತಾನೆ.

ಉದಾಹರಣೆಗೆ ಶ್ರೀರಾಮಕೃಷ್ಣ ಗುರು ತೋತಾಪುರಿ ಮಹಾರಾಜರಿಂದ ದೀಕ್ಷೆ ಪಡೆದ ಕೆಲವೇ ನಿಮಿಷಗಳಲ್ಲೇ ನಿರ್ವಿಕಲ್ಪ ಸಮಾಧಿಯನ್ನು ಪಡೆದರು. ಸಾಮಾನ್ಯರಿಂದ ಇದು ಯಾವತ್ತಾದರೂ ಸಾಧ್ಯವೆ? ತರುವಾಯ ಅವರು ಆರು ತಿಂಗಳ ಕಾಲ ನಿರ್ವಿಕಲ್ಪ ಸಮಾಧಿಯಲ್ಲೇ ಮಗ್ನರಾಗಿದ್ದರು. ಸಾಮಾನ್ಯ ವ್ಯಕ್ತಿಗಳಿಂದ ಇದು ಸಾಧ್ಯವೇನು? ಸಾಮಾನ್ಯರ ಶರೀರ ೨೧ ದಿನಗಳಲ್ಲಿ ತರಗೆಲೆಯಂತೆ ಬಿದ್ದುಹೋಗುತ್ತದೆ ಎಂದು ಅವರೇ ಹೇಳಿರುವರಲ್ಲ. ಅವರದು ಮರ್ತ್ಯ ಶರೀರವಲ್ಲ. 'ಭಗವತೀ ತನು.' ಆದ್ದರಿಂದ ಅವರಿಗೆ ಆಧ್ಯಾತ್ಮಿಕ ಸಾಧನೆಗಳ ಪ್ರಚಂಡ ಆವೇಗವನ್ನು ತಡೆದುಕೊಳ್ಳುವುದು ಸಾಧ್ಯವಾಯಿತು. ನರೇಂದ್ರನಂತಹ, ಗಿರೀಶ ಘೋಷರಂತಹ ಪ್ರಚಂಡರನ್ನು ಶ್ರೀರಾಮಕೃಷ್ಣರಲ್ಲದೆ ಬೇರೆ ಯಾರಿಗಾದರೂ ಬಗ್ಗಿಸಲು ಸಾಧ್ಯವಿತ್ತೇನು? ಅವತಾರಪುರುಷನದು ಅತಿಮಾನುಷ ಸಾಮರ್ಥ್ಯ.

೨) ಅವನ ಆಗಮನ ಸಜ್ಜನರಿಗೆ ತ್ರಾಣವನ್ನು ತುಂಬಲು. ಅಧರ್ಮ ವ್ಯಾಪಕವಾದಾಗಲೂ, ದುಷ್ಟರ ಸಂಖ್ಯೆ ಅಧಿಕವಾದಾಗಲೂ ಸಮಾಜದಲ್ಲಿ ಸಜ್ಜನರು, ಸದಾಚಾರವಂತರು ಇದ್ದೇ ಇರುತ್ತಾರೆ. ಅವರು ಸಮಾಜರಥವು ಈ ದುಃಸ್ಥಿತಿಯಿಂದ ಹೊರಬರಲಿ ಎಂದು ಇನ್ನಿಲ್ಲದಂತೆ ಕಾತರಿಸುತ್ತಿರುತ್ತಾರೆ. ಅವತಾರಪುರುಷರು ಅವರಿಗೆ ತ್ರಾಣ ತುಂಬಿ ಅವರ ಆಶಾಪ್ರತೀಕ್ಷೆಗಳನ್ನು ಈಡೇರಿಸುತ್ತಾರೆ. ಕೇವಲ ೧೮೫ ವರ್ಷಗಳ ಹಿಂದೆ ನಾಸ್ತಿಕತೆಯ ಗಾಳಿ ಹರಡಿದ್ದ ದಿನಗಳಲ್ಲೂ ಗೋಪಾಲೇರ್ ಮಾ, ನಾಗಮಹಾಶಯ, ವೈಷ್ಣವಚರಣ, ನಾರಾಯಣ ಶಾಸ್ತ್ರಿಯಂತಹ ವ್ಯಕ್ತಿಗಳು ಇದ್ದರು ಎಂಬುದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವೆ? ಶ್ರೀರಾಮಕೃಷ್ಣರ ಸಂಸ್ಪರ್ಶದಿಂದಲೇ ಅವರ ಆಧ್ಯಾತ್ಮಿಕ ಜೀವನ ಎಂಥಹ ಊರ್ಜಿತಾವಸ್ಥೆಯನ್ನು ತಲುಪುವಂತಾಯಿತು! 'ಪರಿತ್ರಾಣಾಯ ಸಾಧೂನಾಂ' ಎಂಬುದೇ ಅವತಾರಪುರುಷನ ಜೀವಿತೋದ್ದೇಶ.

೩) ಅವತಾರನಲ್ಲಿ ನಾವು ಪ್ರಚಂಡ ದೈವೀ ಆಕರ್ಷಣೆಯನ್ನು ನೋಡುತ್ತೇವೆ. ಶ್ರೀ ಚೈತನ್ಯ ಮಹಾಪ್ರಭು 'ಹರಿ ಬೋಲ್'

---

೨ 'ಶ್ರೀರಾಮಕೃಷ್ಣ ವಚನವೇದ', ಭಾಗ ೧, ಪು. ೫
೩ 'ವೀರಸಂನ್ಯಾಸಿ ವಿವೇಕಾನಂದ' ಸ್ವಾಮಿ ಪುರುಷೋತ್ತಮಾನಂದ, ಪು.೨೬೧
೪ 'God Lived with them', Swami Chetanananda, p. 237

ಎಂದು ನರ್ತಿಸಿದರೆ ಊರಿಗೆ ಊರೇ ಹುಚ್ಚೆದ್ದು ಅವರನ್ನು ಹಿಂಬಾಲಿಸಿತು. ಸ್ವಾಮಿ ರಾಮತೀರ್ಥರು ಪ್ರವಚನ ಮುಗಿಸಿದ ಮೇಲೂ ಇಡೀ ಶ್ರೋತೃವೃಂದ ಅವರ ಹಿಂದೆ ಹಿಂದೆಯೇ ಹೋಗುತ್ತಿತ್ತು. ಕಾರಣವೇನೆಂಬುದು ಆ ಜನಗಳಿಗೇ ಗೊತ್ತಿಲ್ಲ. ಅವತಾರನ ದೈವೀ ಆಕರ್ಷಣೆಯಿದು! ಶ್ರೀರಾಮಕೃಷ್ಣರು ದಿನವೂ ತಮ್ಮ ಕೋಣೆಯಿಂದ ಸ್ನಾನಕ್ಕೆಂದು ಗಂಗೆಗೆ ಹೋಗುತ್ತಿದ್ದರೆ ಜನ ಸಾಲಾಗಿ ನಿಂತು ಅವರ ತಪ್ತಕಾಂಚನವರ್ಣದ ರತ್ನ ಮಾನುಷರೂಪವನ್ನು ಮನದಣಿಯೆ ನೋಡುತ್ತಿದ್ದರು. ದಿನವೂ ನೋಡುವ ಒಬ್ಬ ವ್ಯಕ್ತಿಯನ್ನು ಹೊಸದಾಗಿ ನೋಡುವುದಕ್ಕೇನಿದೆ? ಅವರು ಫುಲುಯಿ ಶ್ಯಾಮಬಜಾರ್ ಎಂಬಲ್ಲಿಗೆ ಹೋದಾಗ ಅಲ್ಲಿ ೭ ಹಗಲು ೭ ರಾತ್ರಿ ನಿರಂತರ ಭಗವನ್ನಾಮ ಸಂಕೀರ್ತನೆ ನಡೆಯಿತು. ಎಲ್ಲಿ ನೋಡಿದರಲ್ಲಿ ಜನಗಳೋ ಜನಗಳು! ಅವತಾರಪುರುಷನ ಪ್ರಚಂಡ ದೈವೀ ಆಕರ್ಷಣೆಯಿದು.

೪) ಧರ್ಮ ಸಂಸ್ಥಾಪನೆಗಾಗಿ ಅವನ ಆಗಮನ. ಧರ್ಮ ಸಂಸ್ಥಾಪನೆಯ ಕಾರ್ಯವನ್ನು ಒಬ್ಬ ಧರ್ಮಗುರುವಾಗಲೀ, ರಾಜಮಹಾರಾಜ, ಚಕ್ರವರ್ತಿಯಾಗಲಿ, ರಾಜಕಾರಣಿಯಾಗಲಿ, ಪಂಡಿತನಾಗಲಿ ಮಾಡಲಾರನು. ಅವತಾರಪುರುಷ ಮಾತ್ರ ಧರ್ಮವೃಕ್ಷದಲ್ಲಿನ ಕಳೆಗಳನ್ನು, ಗೆದ್ದಲುಗಳನ್ನು ಕತ್ತರಿಸಿ ಹಾಕಿ ಅದು ಸುಪುಷ್ಟವಾಗಿ ಚಿಗುರುವಂತೆ ಮಾಡುತ್ತಾನೆ. ಶ್ರೀರಾಮಕೃಷ್ಣರು ಧರ್ಮಚಕ್ರ ಪ್ರವರ್ತನವನ್ನು ಹೇಗೆ ಮಾಡಿದರು? ೧) ತಮ್ಮ ಅಭೂತಪೂರ್ವ ಸಾಧನಾ ಜೀವನದಿಂದ, ೨) ತಮ್ಮ ಪರಮ ಉದಾತ್ತ ಬೋಧನೆಗಳಿಂದ, ಹಾಗೂ ೩) ಶಿಷ್ಯಪರಂಪರೆಯ ನಿರ್ಮಾಣದಿಂದ ಧರ್ಮಸಂಸ್ಥಾಪನಾ ಕಾರ್ಯವನ್ನು ಮಾಡಿದರು. ಸ್ವಾಮಿ ರಾಮಕೃಷ್ಣಾನಂದರು ಹೇಳುವಂತೆ ಶ್ರೀರಾಮಕೃಷ್ಣರ ಜೀವನ-ಸಂದೇಶ + ಶ್ರೀಮಾತೆಯವರ ಜೀವನ- ಸಂದೇಶ + ಸ್ವಾಮಿ ವಿವೇಕಾನಂದರ ಜೀವನ - ಸಂದೇಶ + ೧೫ ಶಿಷ್ಯರ ಜೀವನ - ಸಂದೇಶ + ಅನಂತ = ಶ್ರೀರಾಮಕೃಷ್ಣಾವತಾರ.[೫]

ಅವತಾರಪುರುಷನು ಇತಿಹಾಸವನ್ನು ನಿರ್ಮಾಣ ಮಾಡುತ್ತಾನೆ. ಮಹಾನ್ ಚಾರಿತ್ರ್ಯ ಅವನ ಕೊಡುಗೆ. ಅವನು ಆಧ್ಯಾತ್ಮಿಕ ಪ್ರಜ್ಞೆಯನ್ನು ಎಚ್ಚರಗೊಳಿಸುತ್ತಾನೆ.[೬] ನಮ್ಮ ದೇಶದ ಆಧ್ಯಾತ್ಮಿಕ ಪ್ರಜ್ಞೆ ಎಂದು ಹೇಳಿದಾಗ ಅದು ರಾಮಭಕ್ತಿ, ಕೃಷ್ಣಭಕ್ತಿ. ಅವತಾರಪುರುಷನ ಪೂಜೆ, ಆರಾಧನೆ, ಅನುಸಂಧಾನವಿಲ್ಲದೆ ಕೇವಲ ಅದ್ವೈತ ಸಾಧನೆಯನ್ನು ಒಂದು ವೇಳೆ ನಮ್ಮ ದೇಶದಲ್ಲಿ ಹೇಳಿಕೊಟ್ಟಿದ್ದರೆ ಎಷ್ಟೋ ಕೋಟಿ ಕೋಟಿ ಜನರು ಆಧ್ಯಾತ್ಮಿಕ ಜೀವನದಿಂದ ವಂಚಿತರಾಗುತ್ತಿದ್ದರು. ಸ್ವಾಮಿ ವಿವೇಕಾನಂದರು ಹೇಳುವಂತೆ, ''ಶ್ರೀರಾಮಕೃಷ್ಣರು ತಮ್ಮ ಅಭೂತಪೂರ್ವ ಜೀವನದಿಂದ ಬ್ರಹ್ಮಕುಂಡಲಿನಿಯನ್ನು ಜಾಗೃತಗೊಳಿಸಿದ್ದಾರೆ'', ''ಶ್ರೀರಾಮಕೃಷ್ಣರ ಆಗಮನದಿಂದ ಸತ್ಯಯುಗ ಆರಂಭವಾಗಿದೆ.'' ನಾವೆಲ್ಲ ತೆಪ್ಪಗಳ ಹಾಗೆ - ಹಾಗೂ ಹೀಗೂ ಕಷ್ಟಪಟ್ಟು ಆಚೆಯ ದಡ ಸೇರಿದರೆ ಅದೇ ಸಾಹಸ. ಅವನು ದೊಡ್ಡ ಜಹಜು-ಸಾವಿರಾರು ಜನರನ್ನು ಭವಸಾಗರದ ಆಚೆ ದಡಕ್ಕೆ ತಲುಪಿಸುವ ಜಹಜು. ಆದ್ದರಿಂದ ಸ್ವಾಮಿ ವಿವೇಕಾನಂದರು, ಶ್ರೀರಾಮಕೃಷ್ಣರನ್ನು **'ಶಕ್ತಿಸಮುದ್ರಸಮುತ್ಥ ತರಂಗಂ'**- ಶಕ್ತಿಸಮುದ್ರದಲ್ಲಿ ಮೇಲೆದ್ದ ಮಹಾನ್ ತರಂಗ ಎಂದು ಒಂದು ಭಜನೆಯಲ್ಲಿ ಸ್ತುತಿಸಿದ್ದಾರೆ.

''ಅವತಾರಪುರುಷನನ್ನು ನೋಡಿದರೆ ಭಗವಂತನನ್ನೇ ನೋಡಿದ ಹಾಗೆ. ನಾವು ಗಂಗೆಯನ್ನು ನೋಡಬೇಕಾದರೆ ಗಂಗೋತ್ರಿಯಿಂದ ಗಂಗಾಸಾಗರದವರೆಗೆ ಹೋಗಬೇಕಾಗಿಲ್ಲ. ವಾರಾಣಸಿಯಲ್ಲಿ ಇಳಿದು ಗಂಗಾಜಲವನ್ನು ಪ್ರೋಕ್ಷಣೆ ಮಾಡಿಕೊಂಡರೆ ಸಾಕು. ನಾನು ನಿಮ್ಮನ್ನು ಮುಟ್ಟಬೇಕಾದರೆ ತಲೆಯಿಂದ ಪಾದದವರೆಗೆ ಮುಟ್ಟಬೇಕಾಗಿಲ್ಲ. ಭುಜವನ್ನೋ, ಕೈಯನ್ನೋ ಮುಟ್ಟಿದರೆ ಸಾಕು'' ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಮಾತ್ರವಲ್ಲ, ಎಲ್ಲಿಯವರೆಗೆ ನಾವು ಮನುಷ್ಯರಾಗಿದ್ದೇವೆಯೋ ಅಲ್ಲಿಯವರೆಗೆ ಮನುಷ್ಯ ದೇವರನ್ನು ಮಾತ್ರ ಅರ್ಥಮಾಡಿಕೊಳ್ಳಬಲ್ಲೆವು. ಆದ್ದರಿಂದ ನಮಗೆ ಅವತಾರನೇ ಬೇಕು, ಅವತಾರನೇ ಸಾಕು.

ಶ್ರೀರಾಮಕೃಷ್ಣರ ಜೀವನವನ್ನು ಓದುತ್ತ ಓದುತ್ತ ದಿನವೂ ಪಾರಾಯಣ ಮಾಡುವುದರಿಂದ **'ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ'** *(ಗೀತೆ, ೪.೯)* - ದೇಹವನ್ನು ತ್ಯಜಿಸಿದ ಮೇಲೆ ಪುನರ್ಜನ್ಮವಿಲ್ಲ. ಮಾತ್ರವಲ್ಲ ಬದುಕಿರುವಾಗಲೇ ವ್ಯಕ್ತಿ ರಾಗ, ಭಯ, ಕ್ರೋಧದಿಂದ ಮುಕ್ತನಾಗಿ ಭಗವದ್ಭಾವದಿಂದ ಕೂಡಿ, ಭಗವಂತನನ್ನೇ ಆಶ್ರಯಿಸಿದವನಾಗಿ **'ಬಹವೋ ಜ್ಞಾನ ತಪಸಾ ಪೂತಾ ಮದ್ಭಾವಮಾಗತಾಃ'** *(ಗೀತೆ, ೪.೧೦)* ಜ್ಞಾನ ತಪಸ್ಸಿನಿಂದ ಪರಿಶುದ್ಧನಾಗಿ ಭಗವದ್ಭಾವವನ್ನೇ ಪಡೆಯುತ್ತಾನೆ.

ಶ್ರೀರಾಮಕೃಷ್ಣರ ಆಧ್ಯಾತ್ಮಿಕಾನುಭವಗಳ ಪರಿಪೂರ್ಣತೆಯನ್ನು, ಅಗಾಧತೆಯನ್ನು ಕಂಡಾಗಲೂ, ಅವರು ತಮ್ಮ ಕುರಿತಾಗಿ ಹೇಳಿದ ಮಾತುಗಳನ್ನು ಅವಲೋಕಿಸಿದಾಗಲೂ ಅವತಾರವರಿಷ್ಠರೆಂದು ಸ್ಪಷ್ಟವಿದಿತವಾಗುತ್ತದೆ. ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರನ್ನು ಹೀಗೆ ಸ್ತುತಿಸುತ್ತಾರೆ : (ಭಯವೇತಕೆ?)

ವೇದವಾರಿಧಿಮಥನದಿಂ ಬಂದ ಸುಧೆಯು
ಹರಿಹರಬ್ರಹ್ಮಾದಿ ಸುರರ ಬಲನಿಧಿಯು
ತುಂಬಿ ತುಳುಕುತಿಹುದದುವೆ ಪೂರ್ಣರೂಪದಲಿ ॥
ಅವತಾರಸಾರ ಶ್ರೀರಾಮಕೃಷ್ಣರಲಿ ![೭]

✽

---

೫ 'God Lived with them', *Swami Chetananada, p. 290*
೬ 'Universal Message of Bhagavad Gita', Part 1, *Swami Ranganathananda, p.392*
೭ **'Whom to Fear?'** ಎಂಬ ಕವಿತೆ, 'In Search of God and Other Poems', *Swami Vivekananda, p.68* ಕನ್ನಡಾನುವಾದ : **'ಭಯವೇತಕೆ?'** ಡಾ.ಎಚ್.ಎನ್. ಮುರಳೀಧರ, 'ಹಾಡು ಚಾಗಿಯ ಹಾಡನು' ಸಂಕಲನ, ಪು.೬೩.